**ಆರ್.ಡಬ್ಲ್ಯೂ: 1**

**ದಿನಾಂಕಃ 28-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ಮತ್ತು 5 ನೇ ಎದುರುದಾರರ ಪರವಾಗಿ ಶ್ರೀಮತಿ ಪಿ.ಕೆ.ಟಿ. ವಕೀಲರಿಂದಃ-**

7. ಸರ್ವೆ ನಂ.116 ರಲ್ಲಿ ಪಾಂಡುರಂಗ ಗುಣಾ ನಾಯ್ಕು ರವರಿಗೂ ಸಹ ಹಕ್ಕು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪಾಂಡುರಂಗ ಗುಣಾ ನಾಯ್ಕು ರವರಿಗೆ ¼ ನೇ ಅಂಶ ಹಕ್ಕು ಇರುತ್ತದೆ ಎಂದರೆ ಸರಿ. ಅದೇ ಪ್ರಕಾರವಾಗಿ ಸಿವಿಲ್ ದಾವೆ ನಂ.2/1999 ರಲ್ಲಿ ತೀರ್ಪು ಬಂದಿರುತ್ತದೆ ಎಂದರೆ ಸರಿ.

**ಪಾಟೀ ಸವಾಲುಃ 10 ನೇ ಎದುರುದಾರರ ಪರವಾಗಿ ಶ್ರೀ ಎಂ.ಎಂ.ಎಂ. ವಕೀಲರಿಂದಃ-**

8. 10 ನೇ ಎದುರುದಾರರಾದ ಶ್ರೀಮತಿ ಸುಗಂಧಾ ರವರು ನನ್ನ ಮೃತ ಅಣ್ಣನಾದ ಸುರೇಶ ರವರ ಹೆಂಡತಿ ಎಂದರೆ ಸರಿ. ಆದಕಾರಣ, ಅವರಿಗೂ ಸಹ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ. ಅದೇ ರೀತಿ, ಈ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಪರಿಹಾರ ಹಣ ಬಂದಲ್ಲಿ, ಅದರಲ್ಲಿಯೂ ಸಹ ಅವರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ಈ ಹಿಂದೆ ಸೀ-ಬರ್ಡ್ ಗೆ ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದ ಪರಿಹಾರದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ